**ದಿನಾಂಕಃ 20.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

# ಪಾಟೀಸವಾಲುಃ ವಾದಿಪರ ವಕೀಲರಾದ ಶ್ರೀ ಬಿ.ಎ.ಎಸ್ ಅವರಿಂದ-

1. ನಾನು 7 ನೇ ತರಗತಿ ಓದಿದ್ದೇನೆ. ಈ ದಾವೆಯನ್ನು ಒಟ್ಟು 12 ಜನರ ವಿರುದ್ಧ ಹೂಡಿದ್ದು ಅವರುಗಳ ಹೆಸರು ಸೋಮಯ್ಯ, ಪುಟ್ಟರಾಜಯ್ಯ, ಚಂದ್ರ ಹಾಗೂ ನನ್ನ ವಿರುದ್ಧ ಹಾಗೂ ಇನ್ನೂ ಕೆಲವರ ವಿರುದ್ಧ ಅವರುಗಳ ಹೆಸರುಗಳು ಹೇಳಲು ಆಗುವುದಿಲ್ಲ. ಈ ದಾವೆಯನ್ನು ತಮಗೆ ಅರ್ಧ ಭಾಗ ಬರಬೇಕೆಂದು ಸಲ್ಲಿಸಿರುತ್ತಾರೆ. ಸರ್ವೇ ನಂ.21 ರಲ್ಲಿ 11 ಗುಂಟೆ, 22 ರಲ್ಲಿ 1 ಎಕರೆ 40 ಗುಂಟೆ, 22/1, 22/3 ಹಾಗೂ 41/1 ರಲ್ಲಿ 1 ಎಕರೆ 30 ಗುಂಟೆ ಗಳಿಗೆ ಸಂಬಂಧಪಟ್ಟಂತೆ ಈ ದಾವೆಯನ್ನು ಹೂಡಲಾಗಿದೆ. ಈ ಸ್ವತ್ತುಗಳಲ್ಲಿ ಯಾರ್ಯಾರ ಹೆಸರಿಗೆ ಎಷ್ಟೆಷ್ಟು ಖಾತೆ ಇದೆ ಎಂದು ನನಗೆ ಮರೆತು ಹೋಗಿದೆ.

2. ನನ್ನ ವಯಸ್ಸು ಈಗ 39 ವರ್ಷ. 1 ನೇ ವಾದಿ ಸಣ್ಣಮ್ಮ ಅವರ ಪತಿಯ ಹೆಸರು ನನಗೆ ಗೊತ್ತಿಲ್ಲ. ವಾದಿ 2 ರಿಂದ 4 ರವರ ತಂದೆ ಹೆಸರು ನನಗೆ ಗೊತ್ತಿಲ್ಲ. ಕಿವುಡಯ್ಯ ನನ್ನ ದೊಡ್ಡಪ್ಪ. ಅವರು ನಾನು ಹುಟ್ಟುವ ಮೊದಲೆ ತೀರಿಹೋಗಿದ್ದರು. ನನ್ನ ತಂದೆ ಈಗಲೂ ಜೀವಂತ ಇದ್ದಾರೆ ಎಂದರೆ ಸರಿ. ಅವರಿಗೆ ನಮ್ಮ ಕುಟುಂಬದ ಎಲ್ಲಾ ವಿಚಾರ ಗೊತ್ತು ಎಂದರೆ ಸರಿ. ಅವರು ನ್ಯಾಯಾಲಯಕ್ಕೆ ಬಂದರೆ ಕುಟುಂಬದ ಎಲ್ಲಾ ವಿಚಾರದ ಸತ್ಯಾಂಶ ಗೊತ್ತಾಗುತ್ತದೆ ಎಂದರೆ ಅವರಿಗೆ ಗೊತ್ತಿರುವಷ್ಟು ಹೇಳುತ್ತಾರೆ. ಕಿವುಡಯ್ಯ ತೀರಿಹೋಗುವಾಗ ನನ್ನ ತಂದೆ ಇದ್ದರು ಎಂದರೆ ಸರಿ. ಕಿವುಡಯ್ಯ ಯಾರು ಅವರ ತಂದೆ-ತಾಯಿ ಹೆಸರು ಏನೂ ಎಂದು ನನಗೆ ಅಲ್ಪಸ್ವಲ್ಪ ಗೊತ್ತಿದೆ.

3. ನನ್ನ ತಾತನ ತಂದೆ ಹೆಸರು ಕರಿಯಯ್ಯ. ಕರಿಯಯ್ಯ ಅವರ ತಂದೆ ಹೆಸರು ಗೆಂಡೆ ಮಂಚಯ್ಯ. ಗೆಂಡೆ ಮಂಚಯ್ಯನ ಮಗ ಕರಿಯಯ್ಯ ಅವರಿಗೆ ಇಬ್ಬರು ಮಕ್ಕಳು ಎಂದರೆ ಸುಳ್ಳು. ಅವರು ಸಿದ್ದಯ್ಯ ಮತ್ತು ತಿಮ್ಮಯ್ಯ ಎಂದರೆ ಸುಳ್ಳು, ಸಿದ್ದಯ್ಯ ಒಬ್ಬರೆ ಅವರ ಮಗ.

ಕರಿಯಯ್ಯ ಅವರಿಗೆ ಸಿದ್ದಯ್ಯ ಒಬ್ಬರೆ ಮಗ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ನೋಡಿಲ್ಲ. ಕರಿಯಯ್ಯಅವರಿಗೆ ಸಿದ್ದಯ್ಯ ಒಬ್ಬರೆ ಮಗ ಎಂದು ತೋರಿಸಲು ನಾನು ಕೂಡ ಯವೂದೇ ದಾಖಲಾತಿ ಹಾಜರುಪಡಿಸಿಲ್ಲ.

4. ನನ್ನ ತಾತನ ಹೆಸರು ಸಿದ್ದಯ್ಯ ಎಂದರೆ ಸರಿ. ಅವರಿಗೆ 4 ಜನ ಗಂಡು ಮಕ್ಕಳು ಎಂದರೆ 5 ಜನ. ಅವರಿಗೆ 5 ಜನ ಗಂಡು ಮಕ್ಕಳು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸುತ್ತೇನೆ. ಅದು ಯಾವ ದಾಖಲೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಅಲ್ಪ-ಸ್ವಲ್ಪ ಓದಬಲ್ಲೆ ಬರೆಯಲು ಅಷ್ಟಾಗಿ ಬರುವುದಿಲ್ಲ. ಈಗ ನನಗೆ ತೋರಿಸಿದ ನಿಡಿ.1 ರಿಂದ 11 ರ ದಾಖಲೆಗಳಲ್ಲಿ ಅಂತಹ ಯಾವುದೇ ದಾಖಲೆ ಇಲ್ಲ.

5. ಕರಿಯಯ್ಯನವರ ಮಗ ತಿಮ್ಮಯ್ಯ ಅವರಿಗೆ ಕಿವುಡಯ್ಯ ಒಬ್ಬರೇ ಮಗ ಎಂದರೆ ತಿಮ್ಮಯ್ಯ ಎನ್ನುವವರು ಯಾರು ಇಲ್ಲ. ಸದರಿ ಕಿವುಡಯ್ಯನಿಗೆ 1 ನೇ ವಾದಿ ಹೆಂಡತಿ, ಉಳಿದ ವಾದಿಯರು ಅವರ ಮಕ್ಕಳು ಎಂದರೆ ಸರಿಯಲ್ಲ. ಈ ದಾವೆಯನ್ನು ಕಿವುಡಯ್ಯನ ಹೆಂಡತಿ ಹಾಗೂ ಮಕ್ಕಳು ಹೂಡಿದ್ದಾರೆ ಎಂದರೆ ಸರಿ.

6. ನಮ್ಮ ಲಿಖಿತ ಹೇಳಿಕೆಯನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಈ ದಾವೆಗೆ ಲಿಖಿತ ಹೇಳಿಕೆ ಸಲ್ಲಿಸಿ 9 ವರ್ಷ ಆಗಿದೆ, ಸದರಿ ಲಿಖಿತ ಹೇಳಿಕೆಯಲ್ಲಿ ಬರೆದಿರುವ ಕೆಲವು ವಿಚಾರ ತಿಳಿದುಕೊಂಡಿದ್ದೇನೆ ಕೆಲವು ಗೊತ್ತಿಲ್ಲ.

**ಮುಂದುವರಿದ ಪಾಟೀಸವಾಲುಃ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.